


# ಬೈಂಡಿಂಗ್ ಫುಟ್

**ಈ ಟ್ಯುಟೋರಿಯಲ್ನಲ್ಲಿ ನೀವು ಉಷಾ ಜಾನೊಮ್ ಬೈಂಡಿಂಗ್ ಫುಟ್ನ್ನು ಬಳಸುವುದು ಹೇಗೆ ಎಂದು ತಿಳಿಯುತ್ತೀರಿ.**




ಈ ಫುಟ್ ತುಂಬಾ ಮುಖ್ಯವಾಗುತ್ತದೆ ಒಂದು ಸುಲಭ ಹೆಜ್ಜೆಯಲ್ಲಿ ಬಯಾಸ್ ಟೇಪ್‌ನ್ನು ಸಮರ್ಥವಾಗಿ ಮತ್ತು ವೇಗವಾಗಿ ಜೋಡಿಸಬೇಕಾದಾಗ ಈ ಫುಟ್ ತುಂಬಾ ಮುಖ್ಯವಾಗುತ್ತದೆ. ಇಲ್ಲಿದೆ ಫುಟ್…ಎಷ್ಟು ಜಟಿಲವಾಗಿ ಕಾಣುತ್ತದೆ ಎಂಬುದನ್ನು ನೀವು ನೋಡಬಹುದು…ನಿಜ ಇದು ಕೆಲವು ಜಟಿಲ ಮಡಿಕೆಗಳನ್ನು ಮತ್ತು ಹೊಲಿಗೆಗಳನ್ನು ಮಾಡುತ್ತದೆ. ಇದು ಮೊದಲೇ ನಿರ್ಮಿತವಾದ ಕೊಳವೆ ಮಡಿಕೆಗಳು ಮತ್ತು ಸೂಜಿಯನ್ನು ತಲುಪುವವರೆಗೆ ಬಟ್ಟೆಯ ಅಂಚಿನಲ್ಲಿ ಬೈಂಡಿಂಗ್‌ನ್ನು ನಿರ್ದೇಶಿಸುತ್ತದೆ. ನೀವು ವಿವಿಧ ವಿಧಗಳನ್ನು ಬಳಸಬಹುದು- ನೇರವಾದ ಹೊಲಿಗೆ, ಜಿಗ್‌ಜಾಗ್ ಅಥವಾ ಅಲಂಕಾರಿಕ ಹೊಲಿಗೆಗಳು.

ಈ ಪಾಠಕ್ಕೆ ನಿಮಗೆ ಬೇಕಾಗಿರುವುದೆಂದರೆ ಉಷಾ ಜಾನೊಮ್ ಬೈಂಡಿಂಗ್ ಫುಟ್, ಒಂದು 8*8 ಇಂಚ್ ಅಳತೆಯ ಬಟ್ಟೆಯ ತುಂಡು, ಒಂದು ಇಂಚು ಅಗಲದ ಬಯಾಸ್ ಟೇಪ್, ಮತ್ತು ದಾರಗಳು. ಬಯಾಸ್ ಟೇಪ್‌ನ ಅಂಚುಗಳನ್ನು 45 ಡಿಗ್ರಿ ಕೋನದಲ್ಲಿ ಕತ್ತರಿಸಿಕೊಳ್ಳುತ್ತೀರಿ ಎಂದು ಖಚಿತಪಡಿಸಿಕೊಳ್ಳಿ. ಈಗ ಇಲ್ಲಿದೆ ಬೈಂಡಿಂಗ್ ಫುಟ್- ಬೈಂಡಿಂಗ್ ಫುಟ್‌ನ ಈ ಭಾಗವನ್ನು ನೋಡಿ- ಇದೊಂದು ನಳಿಗೆ, ಇದರ ಮೂಲಕ ಬಯಾಸ್ ಟೇಪ್‌ನ್ನು ನುಸುಳಿಸಬಹುದು. ಬಯಾಸ್ಡ್ ಟೇಪ್‌ನ ಅಗಲ ಎರಡು ಅಂಚುಗಳ ನಡುವಿನ ಅಂತರಕ್ಕೆ ಸಮಾನಾಗಿರಬೇಕು, ಈ ರೀತಿ. ಈಗ ನಿಮಗೆ ಅಂಚುಗಳನ್ನು 45 ಡಿಗ್ರಿ ಕೋನದಲ್ಲಿ ಕತ್ತರಿಸುವುದು ಏಕೆ ಮುಖ್ಯ ಎಂಬುದು ಅರ್ಥವಾಗಿದೆಯೇ- ಇದು ಟೇಪ್‌ನ್ನು ನಳಿಕೆಯ ಮೂಲಕ ಸುಲಭವಾಗಿ ನುಸುಳಿಸಲು ನೆರವಾಗುತ್ತದೆ. ನಿಮಗೆ ಖಾತ್ರಿಯಾಗದಿದ್ದರೆ, ಬಯಾಸ್ ಟೇಪ್‌ನ ಅಗಲವನ್ನು ಅದನ್ನು ನುಸುಳಿಸುವ ಮೂಲಕ ಪರೀಕ್ಷಿಸಿ.

ಸಾಮಾನ್ಯವಾದ ಪ್ರೆಸ್ಸರ್ ಫುಟ್‌ನ್ನು ತಟ್ಟನೆ ಬೈಂಡಿಂಗ್ ಫುಟ್ ಮೂಲಕ ಬದಲಿಸಿ.



ಬಯಾಸ್ ಟೇಪ್‌ನ್ನು ಫುಟ್‌ನ ಕೆಳಗೆಡಿ ಮತ್ತು ಫುಟ್‌ನ್ನು ಕೆಳತನ್ನಿ. ಟೇಪ್ ಮೇಲೆ ಸಾಮಾನ್ಯ ಹೊಲಿಗೆ ಹಾಕಿ ಮತ್ತು ವೀಡಿಯೋದಲ್ಲಿ ತೋರಿಸಿರುವಂತೆ ಒಂದಿಷ್ಟು ನೂಲು ಸಿಗುವಂತೆ ಎಳೆಯಿರಿ—ನೂಲು ಉಳಿಯುವಂತೆ ಕತ್ತರಿಸಿ. ಈಗ ಟೇಪ್‌ನ್ನು ಯಂತ್ರದಿಂದ ತೆಗೆಯಿರಿ.

ಇಲ್ಲಿ ನೀವು ನೋಡುವಂತೆ ನೂಲು ಹಾಕಿ ಮತ್ತು ಬಯಾಸ್ ಟೇಪ್ ನಳಿಕೆಯಲ್ಲಿ ಸೂಕ್ತ ಜಾಗಕ್ಕೆ ಬರಲು ಸಹಾಯವಾಗುವಂತೆ ಅದನ್ನು ನಿಧಾನವಾಗಿ ಎಳೆಯಿರಿ. ಒಮ್ಮೆ ಬಯಾಸ್ ಟೇಪ್ ನಳಿಕೆಯ ಒಳಗೆ ಸೆಟ್ ಆದ ನಂತರ, ಬಟ್ಟೆಯನ್ನು ಚಡಿಯ ಮೇಲಿಡಿ…ಇಲ್ಲಿ…ನೋಡಿ ಹೇಗಾಗುತ್ತದೆ ಎಂದು …ಈ ರೀತಿ. ಬಟ್ಟೆ ಚಡಿಯ ಮೇಲೆ ದೃಢವಾಗಿದೆ ಎಂಬುದನ್ನು ಖಾತ್ರಿಪಡಿಸಿಕೊಳ್ಳಿ . ಅದರ ವಿರುದ್ಧವಾಗಿ ಬಯಾಸ್ ಟೇಪನ್ನು ಹಿಡಿದುಕೊಳ್ಳಿ.




ಪ್ಯಾಟರ್ನ್ ಸೆಲೆಕ್ಟರ್ ಡಯಲ್ ಅನ್ನು ಸ್ಟಿಚ್ ‘ಎ’, ಮತ್ತು ಹೊಲಿಗೆಯ ಉದ್ದವನ್ನು 2.5 ಕ್ಕೆ ಸೆಟ್ ಮಾಡಿ. ನಿಧಾನವಾಗಿ ಹೊಲಿಗೆ ಆರಂಭಿಸಿ ಮತ್ತು ಬಯಾಸ್ ಟೇಪನ್ನು ಬಟ್ಟೆಗೆ ಎದುರಾಗಿ ನಿರಂತರವಾಗಿ ಹಿಡಿದುಕೊಂಡಿದ್ದಾರೆ ಎಂಬುದನ್ನು ಖಚಿತಪಡಿಸಿಕೊಳ್ಳಿ. ಚಡಿಯ ಉದ್ದಕ್ಕೂ ಹೊಲಿಯುವಾಗ ಬಟ್ಟೆಯನ್ನು ನಿರ್ದೇಶಿಸಿ ಮತ್ತು ಟೇಪ್‌ನ್ನು ನಳಿಕೆಯುದ್ದಕ್ಕೂ ನಿರ್ದೇಶಿಸಿ. ನೀವು ಇದರಲ್ಲಿ ನಿರಂತರ ಬೆಳವಣಿಗೆ ಸಾಧಿಸುತ್ತಲೇ ಬಯಸುವ ಪರಿಪೂರ್ಣತೆಯನ್ನು ಸಾಧಿಸಲು ಅಭ್ಯಾಸದ ಅಗತ್ಯವಿದೆ.



ಬಯಾಸ್ ಟೇಪ್‌ನ ತುದಿಯವರೆಗೂ ಹೊಲಿದ ನಂತರ, ಬಟ್ಟೆಯನ್ನು ತೆಗೆಯಿರಿ ಮತ್ತು ನೂಲನ್ನು ಕತ್ತರಿಸಿ. ಹೆಚ್ಚಿನ ಬಯಾಸ್ ಟೇಪನ್ನೂ ಕೂಡ ಉಳಿಯದಂತೆ ಎರಡೂ ತುದಿಯಲ್ಲಿ ಕತ್ತರಿಸಿ.



ನಿಮ್ಮ ಬೈಂಡಿಂಗ್ ಕ್ಷಿಪ್ರ ಸಮಯದಲ್ಲಿ ಸಿದ್ಧವಾಗಿದೆ. ಮತ್ತು ಎಷ್ಟು ನೀಟಾಗಿ ಇದು ಸಾಧ್ಯವಾಗಿದೆ ಎಂದು ನೋಡಿ.
ಬೈಂಡಿಂಗ್ ಸಾಮಾನ್ಯವಾಗಿ ಹೊದಿಕೆ ತಯಾರಿಸುವವರಿಗೆ ಅಚ್ಚುಮೆಚ್ಚು, ಏಕೆಂದರೆ ಅತೀ ಹೆಚ್ಚಾಗಿ ಬೇಕಾಗುವುದು ಅವರಿಗೆ, ಆದರೆ ನೂಲು ಬಿಡದಂತೆ ಬಟ್ಟೆಯ ಅಂಚನ್ನು ಮುಚ್ಚುವ ಅಗತ್ಯತೆಯಿರುವ ಎಲ್ಲಿಯೂ ಇದನ್ನು ಬಳಸಬಹುದು. ಇದು ಬಟ್ಟೆಯ ಅಂದವನ್ನು ಹೆಚ್ಚಿಸುತ್ತದೆ ಎಂದಾದರೆ ಬಳಸಲು ಹಿಂಜರಿಯದಿರಿ- ಉದಾಹರಣೆಗೆ ನಿಮಗೆ ಇಷ್ಟವಿಲ್ಲದ ಅಂಚನ್ನು ಮರೆಮಾಚುವುದು, ಆಕ್ಸೆಸರಿಗಳ ಅಲಂಕಾರಕ್ಕೆ, ಉಡುಪುಗಳು, ಮತ್ತು ಇತರೆಡೆ.

ಈ ಫುಟ್‌ನಿಂದ ವಸ್ತುಗಳ ಅಂದವನ್ನು ಎಷ್ಟು ಸುಲಭವಾಗಿ ಬದಲಿಸಬಹುದು ಎಂಬುದರ ಬಗ್ಗೆ ನೀವು ಆಶ್ಚರ್ಯಚಕಿತರಾಗುತ್ತೀರಿ ಮತ್ತು ಒಂದು ಹ್ಯಾಟ್ ಬೀಳುವಷ್ಟರಲ್ಲಿ ನೀವಿದರೆ ಕಡೆಗೆ ಮುನ್ನುಗ್ಗುತ್ತೀರಿ